Regd No M 1299 SATYAVADI Founded 1917

The Oldest Newspaper of Mysore

ಸತ್ಯವಾದಿ

ರಾಷ್ಟ್ರೀಯ ವಾರ್ತಾಪತ್ರಿಕೆ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 158] ಬುಧವಾರ 12—5—48 [ಬಿಡಿಪ್ರತಿ

ಇಂದಿನ ವರ್ತಮಾನ

ರಾಯಚಕರು— ರಜಾಕರರು ಸಶಸ್ತ್ರರಾದ ರಾಯಚೂರು ಬೀದಿಗಳಲ್ಲೆಲ್ಲಾ ಮೆರೆಯುತ್ತಾ ಸಿಕ್ಕಿದಕಡೆಯಲ್ಲೆಲ್ಲಾ ಲೂಟಿ ನಡಿಸಿದರು. — ಔಂಗಾಬಾದು ಕಾಲೇಜು ಬಳಿ ಬಾಂಬು ಸ್ಫೋಟವಾಯಿತು — ಸರಕಾರದ ನೀತಿಯನ್ನು ಪ್ರತಿಭಟಿಸಿ ಹಡೆಗಾಂವಿನಲ್ಲಿ ಪೋಲೀಸರು ಮತ್ತು ಪಾಲೀಗೌಡರು ರಾಜೀನಾಮೆ ಇತ್ತರು —ಚಿನ್ನಕೋಟೆ ಗ್ರಾಮಗಳ ಮೇಲೂ ರಜಕಾರರ ಧಾಳಿ ನಡೆದಿದೆ — ಸುಮಾರು ಎಲ್ಲಾ 50 ಸಾವಿರ ರೂ. ಗಳಷ್ಟು ಲೂಟಿಯಾಗಿದೆ.

ಪ್ಯಾರಿಸ್.... ರಾಜಕುಮಾರಿ ಎಲಿಜಬೆತ್ತರು ವಾರ್ಯಾಂತ್ಯದಲ್ಲಿ ಪ್ಯಾರಿಸ್ಸಿಗೆ ಭೇಟಿ ಕೊಟ್ಟಾಗ ಅವರ ಪ್ರಾಣಾಪಹರಣ ಮಾಡಲು ಪ್ರಯತ್ನ ನಡೆಯಿತೆಂಬುದರ ಪತ್ತೇತರದೂದು ನಡೆಯುತ್ತಿದೆ.

ನವದೆಹಲಿ — ನೈಜಾಮರಿಗೆ ಲಾರ್ಡ್ ಮೌಂಟುಬ್ಯಾಟನ್ನರು ದೆಲ್ಲಿಗೆ ಬರಬೇಕೆಂದು ಇತ್ತಿದ್ದ ಆಹ್ವಾನವನ್ನು ನೈಜಾಮರು ನಿರಾಕರಿಸಿದ್ದಾರೆಂಬ

ಬೆಂಗಳೂರು— ಬ್ರಿಟಿಷ್ ರಾಜ್ಯಾಧಿಕಾರವೇ ಇಲ್ಲವಾಗಿ ಪೊಗದಿಯ ಪ್ರಶ್ನೆ ಏಳುವುದಿಲ್ಲವೆಂದು ಸರ್ಕಾರಿ ಪ್ರೆಸ್ ನೋಟು ತಿಳಿಸುತ್ತದೆ

...ಗರ — ಕಾಶ್ಮೀರದಲ್ಲಿ ಸಾ...ನೋತ್ಸವವು ವೈಭವದಿಂದ ...ಯಿತು.

...ರವರು ಸಂಯುಕ್ತ ...ನಾಮಿಕ್ ಕವಿಷನ್ನಿನ ...ರವಿನೆಯಲ್ಲಿ ಜೂಕ್ ...ಪತಿಣವೀಯುವರೆಂದು ತಿಳಿಯಬಂದಿದೆ.

ವುಡ್ ಲ್ಯಾಂಡ್ಸ್

30—4—48 ರಿಂದ

ಮಾಡರ್ನ್ ಥಿಯೇಟರ್ಸ್‌ರವರ

ಅತ್ಯಂತ ಸುಂದರ ತಮಿಳು ಚಿತ್ರ

1000 ತಲೈವಾಂಗಿ

ಅಪೂರ್ವ ಚಿಂತಾಮಣಿ

ಪಾತ್ರ — ಪಿ ಎಸ್. ಗೋವಿಂದನ್

ಎಂ. ಆರ್. ಸ್ವಾಮಿನಾಥನ್

ಕಾಳಿ ಎನ್. ರತ್ನಂ. ವಿ. ಎನ್. ಜಾನಕಿ,

ರಾಜಾಕಾಂತಂ ಮುಂತಾದವರು

Released by Rajlakhmi Pi...

Gandhinaga...

ರಜಾಕರರ ಹಾವಳಿ

ಅಲಹಾಬಾದು ಪಟ್ಟಣದಲ್ಲಿ ಗೋಮಾಂಸವನ್ನು ಒದರಿ ಮಾಡಕೂಡದೆಂದು ಮುನಿಸಿಪಲ್ ಬೋರ್ಡು ಸಭೆಯು ಗೊತ್ತುವಳಿ ಪಾಸಾಯಿತು.

ಅಮೇರಿಕಾದಲ್ಲಿನ ಐಶ್ವರ್ಯವಂತ ಸ್ತ್ರೀಯರಿಗೆ ಭಾರತದ ಸ್ತ್ರೀಯರ ಸೀರೆ ಧರಿಸುವ ಖುಷಿ ಹೆಚ್ಚಿದೆ

ಬೆಂಗಳೂರು—ಸೋಮವಾರ ಸಂಜೆ ವಿಶ್ವಕರ್ನಾಟಕ ದಿನಪತ್ರಿಕೆ ಮಾಲೀಕರು ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಕಾಂ|| ಅಧ್ಯಕ್ಷರೂ, ಮಂತ್ರಿಗಳೂ, ಪ್ರಮುಖ ಪಾಸಗರೂ ದೊಡ್ಡ ಮನುಷ್ಯರೂ ದಯಮಾಡಿಸಿದ್ದರು. ವಿ.ಕ. ಸೇವೆಯನ್ನು ಪ್ರಶಂಸಿಸಿದರು.

ಟಲ್ ಅವಿಲ್ ಹತ್ತಿರವ ಫಾಜೀ ಜರ್ಮನ್ ಕಾಲೊನಿ ಸರೋನಾವನ್ನು ಯಹೂದ್ಯರು 3034000 ಪೌಂಡುಗಳಿಗೆ ಕೊಂಡುಕೊಂಡಿರುವರು

ಲಂಡನ್— ರಾಜಕುಮಾರಿ ಎಲಿಜಬೆತ್ತರವರಿಗಾಗಿ ಆಧುನಿಕವನ್ನಾಗಿ ಮಾಡುತ್ತಿರುವ ಲಂಡನ್ನಿನಲ್ಲಿರುವ ಕ್ಲಾರೆನ್ಸು ಗೃಹಕ್ಕೆ 50 ಸಾವಿರ ಪೌಂಡು ವೆಚ್ಚ ಮಾಡುವ ಬಗ್ಗೆ ಕೂಲಿಗಾರರ ಸರಕಾರ ಸದಸ್ಯ ವಿ.ll ರೊನಾಲ್ಡ್ ಜೇಬಲೈನರು ಟೀಕಿಸಿದರು. ಸಹಸ್ರಾರು ಮುಂದಿ ಮನೆಗಳಿಗಾಗಿ ಪೇಚಾಡುತ್ತಿರುವಾಗ ಅಂಥ ಖರ್ಚು ಮಾಡಬಾರದೆಂದೇ ಅವರ ಸೂಚನೆ. ರಾಜದಂಪತಿಗಳಿಗೆ ವಸತಿ ಕೊಡಬೇಕಾದುದು ಅಗತ್ಯವಿದ್ದರೆ...

ಪಾಕಿಸ್ತಾನದ ಪ್ರಧಾನ ಮಂತ್ರಿಗಳಾದ ಲಿಯಾಖತ್ ಅಲ್ಲಿ ಖಾನರ ಪತ್ನಿಯರು ಮನೆಯಿಂದ ಹೊರಗೆ ಹೋದಾಗ ಅವರ ಡ್ರೈವರು ಸುಮಾರು 8 ಸಾವಿರ ರೂ. ಬೆಲೆಯ ಆಭರಣಗಳನ್ನು ಕದ್ದು ಕೊಂಡು ಪರಾರಿಯಾದನು.

ಬೆಂಗಳೂರು— ಜನಶಕ್ತಿ ಸಂಪಾದಿಕರು ಪ್ರಕಟಿಸಿದ ವಾರ್ತೆ, ತಮ್ಮ ಪತ್ರಿಕೆ ಮಾರುತ್ತಿದ್ದ ಹುಡುಗರು ಹಿಡಿಯಲ್ಪಟ್ಟು, ಅವರಲ್ಲಿದ್ದ 500 ಜನಶಕ್ತಿ ಪತ್ರಿಕೆ ಕಿತ್ತುಕೊಳ್ಳಲ್ಪಟ್ಟಿತೆಂಬ ಸುದ್ದಿ ಸುಯಲ್ಲವೆಂದೂ ಅವರು ಅಡಿ ಮೇಲು ಮಾಡುವ ಚಳವಳಿಗಾಗಿ ಹಿಡಿಯಲ್ಪಟ್ಟರೆಂದೂ ಅವರನ್ನ ಹಿಡಿದಾಗ ಳ ಜನಶಕ್ತಿ ಪ್ರತಿಗಳು ಮಾತ್ರ ಇದ್ದವೆಂದೂ ಸರಕಾರದ ಪ್ರೆಸ್ ನೋಟು ತಿಳಿಸುತ್ತದೆ.

ಮೈಸೂರು ಮೆ 11—ಈ ದಿನ ರಾಜಧಾನಿಯ ಪೌರಸಭೆಯವರು ಭಾರತ ರಕ್ಷಣಾಮಂತ್ರಿ ಶ್ರೀ ಬಲದೇವ ಸಿಂಗರನ್ನು ಬರಮಾಡಿಕೊಂಡು ಸತ್ಕರಿಸಿದರು. ಜೊತೆಯಲ್ಲಿ ಮೈಸೂರು ಸಂಸ್ಥಾನದ ಗೃಹಮಂತ್ರಿ ಶ್ರೀ ಮರಿಯಪ್ಪನವರಿದ್ದರು. ಪೌರಸಭಾಧ್ಯಕ್ಷ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರ ಸ್ವಾಗತ ಪ್ರಶಂಸನೆಯ ಭಾಷಣಾನಂತರ ಶ್ರೀ ಮರಿಯಪ್ಪನವರು ಪುಟ್ಟ ಭಾಷಣ ಮಾಡಿದರು. ನಂತರ ಶ್ರೀ ಬಲದೇವ ಸಿಂಗರು ವಂದನೆಯನ್ನರ್ಪಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ, ಪರಸ್ಥಿತಿಗಳ ...ತನಾಡಿದರು. ಮಂದೇ ... ಸಂತೋಷ ...ಂಡಿತು

ಮೇನಕೆ

(ಮುಂದುವರಿದುದು)

ಮೇನಕೆಯು ಮತ್ತೆ ಹೇಳ ತೊಡಗಿದಳು—

ಆಹಾ! ಯುಗಯುಗಾಂತರಗಳ ನೆ... ತಪಸ್ಸು ಇಂದಿಗೆ ಫಲವಂತವಾಯಿತೇ... ರಾಜಾ ಎಷ್ಟು ತಪಿಸಿದೆ ಈ ನಿಮ... ಶಾಂತವಾದ ಕಟಾಕ್ಷ ನಿರೀಕ್ಷಣೆಗಾಗಿ; ನನ್ನಲ್ಲಿ ಈ ಬಗೆಯಲ್ಲಿ ದಯಾಭಾವವು ಳ್ಳವರಾಗುವರೆಂದು ಎಷ್ಟು ಆನಂದ ಗೊಂಡೆ! ರಾಜಾ ನಾನು ಧನ್ಯಳು, ನನ್ನ ಬಯಕೆಗಳೆಲ್ಲವೂ ಈಡೇರಿದಂತೆಯೇ.

(ವಿಶ್ವಾಮಿತ್ರನ ಮಾನವನ್ನು ಭರಿಸಲಾರದೆ] ಆದರೂ ಪುರುಷನ ಹೃದಯದಲ್ಲಿ ಕರುಣೆಯೆಂಬುದಿರುವುದಿಲ್ಲ. ಯುಗ ಯುಗಾಂತರಗಳಿಂದ ಸ್ತ್ರೀಯನ್ನು ಹಿಂಡಿಹೀಚುಮಾಡಿ ಸಾಯಿಸುತ್ತಿರುವ ಕಠಿಣತ್ವವು ಸಾಲದೇ! ಇನ್ನೂ ಅನುಮಾನವೇಕೆ? ನಿಮ್ಮ ನಾಮವನ್ನೇ ಜಪಿಸುತ್ತಾ ಇಷ್ಟು ಕಾಲವನ್ನು ಕಳೆದಿನಲ್ಲಾ! ಕೊನೆಗೆ ನಿಮ್ಮನ್ನೇ ಕಂಡಾಗ ಈ ನಿರ್ಲಕ್ಷ್ಯತೆಯನ್ನು ಕಂಡಾಗ, ನನ್ನ ಭಾವನೆಗಳು ಕೇವಲ ಊಹೆಗಳೆಂದು ಅನ್ನಿಸುತ್ತಿದೆ. ಅವಕ್ಕೆ ನಾನು ಕೊಟ್ಟ ಬೆಲೆಯನ್ನು ನಿಮ್ಮ ಪುರುಷ ಹೃದಯದ ಕಾಠಿಣ್ಯತೆಯಿಂದ ನಾಶಗೊಳಿಸಬೇಡಿ. ರಾಜಾ ಸ್ತ್ರೀಯನ್ನು ಅವಮಾನಗೊಳಿಸಬೇಡಿ, ನಿಮ್ಮ ಮಾನವತ್ವವನ್ನು ವ್ಯರ್ಥಗೊಳಿಸಬೇಡಿ.

(ವಿಶ್ವಾಮಿತ್ರನು ತನ್ನ ದೃಷ್ಟಿಯನ್ನು ಆಕೆಯ ಕಡೆಗೆ ತಿರುಗಿಸುವನು]

ಸಾಕು, ಇನ್ನೂ ಈ ನಿಮ್ಮ ಮೂರ್ಖ

At Opera

From 6—5—48

Jungle Girl

A Republic serial

in 15 thrilling Chapters

ಜಂಗಲ್ ಗರ್ಲ್

ಪ್ರತಿ ದಿನ 3 ಆಟಗಳು

Save the Cow

ಗೋವಧೆ ನಿಲ್ಲಲಿ

ಮೌನವನ್ನೇ ಕಂಡು ಆನಂದಗೊಳ್ಳುವೆ
ನೆಂದು ಅಂದುಕೊಂಡಿರುವಿರೋ ಏನೊ
ಆ ಆಶೆಯನ್ನು ಬಿಡಿ. [ವಿಶ್ವಾಮಿತ್ರ
ನು ಆಕೆಯನ್ನು ಸ್ಪೃಶಿಸಿ ಕೂಡಲೇ
ಕೈಯನ್ನು ದೂರಕ್ಕೆ ತೆಗೆದುಕೊಳ್ಳುತ್ತಾ
ಈ ಜಾತಿಗೆ ನಾಚಿಕೆ ಇಲ್ಲ ;
ರನ್ನು ಅವಮಾನ ಗೊಳಿಸುವುದು
ಪುರುಷ ಜಾತಿಗೆ ರಕ್ತದಲ್ಲಿರುವ
ೀನೋ ? ನನ್ನ ಒಪ್ಪಿಗೆ ಇಲ್ಲದೆ
ನ್ನನ್ನು ಮುಟ್ಟುವ ಅಧಿಕಾರವು ನಿಮ
ಎಲ್ಲಿದೆ ? ನಿಮ್ಮ ಪಶುಬಲದಿಂದ
ನನ್ನನ್ನು ಶಪಿಸುವಿರಾ ! ಶಕ್ತವಂತರದೇ
ನ್ಯಾಯವೇನು. ಛೀ ಈ ಪ್ರಪಂಚದ
ಲ್ಲಿ ನ್ಯಾಯಕ್ಕೆ ಸ್ಥಾನವಿಲ್ಲ. (ಸ್ವಲ್ಪ
ಹೊತ್ತು ಸುಮ್ಮನಿದ್ದು) ಆಗಲಿ ರಾಜಾ
ನಿನಗಾಗಿ ಎಷ್ಟು ಅತ್ತೆ : ನೀನು ತಪ್ಪದೆ
ನನ್ನನ್ನು ಅನುಗ್ರಹಿಸುವೀಂದಂದುಕೊಂ
ಡು ಎಷ್ಟು ಮಂದಿಯನ್ನೂ ಕಾಲಿನಿಂದ
ಒದ್ದೆನು. ಪಾಪ, ಅವರನ್ನೆಲ್ಲಾ ನಿನು
ಗಾಗಿ ನಾನು ರೋಧಿಸಿದಂತೆ. ನನಗಾಗಿ
ಹಂಬಲಿಸುತ್ತಾ, ನನ್ನ ಒದೆಗಳನು ಲೆ
ದೆ ಹಾಗೆಯೇ ನನಗಾಗಿ ಎದುರು
ನೋಡುತ್ತಿರುವರಲ್ಲವೆ !

ಆಶ್ಚರ್ಯ, ಪ್ರಪಂಚಕ್ಕೇ ಬೇಕಾದ
ನಾನು, ನಿನಗೆ, ಒಬ್ಬ ಮಾನವನಿಗೆ. ಈ
ಪಯೋಗವಿಲ್ಲದವಳಾದೆನೇ ! ನನ್ನ
ನ್ನು ಪೂಜಿಸುವರನ್ನು ಅನುಗ್ರಹಿಸದೆ
ನಿನ್ನನ್ನು ಪೂಜಿಸಿದೆ. ನನ್ನ ಸರ್ವಸ್ವ
ವನ್ನೂ ನಿನಗೆ ಅರ್ಪಿಸಿದೆ. ನೀನ
ಬೇಡವೆಂದಲ್ಲಿ ಈ ಅಸುಗಳನು ಇಲ್ಲಿಯೆ
ತ್ಯಜಿಸುವೆನು. ನನ್ನ ಸೌಂದರ್ಯವ
ನೂ ಪ್ರೇಮಯುತವಾದ ಹೃದಯವನೂ
ನನ್ನ ಸರ್ವಸ್ವವನ್ನೂ ಇಲ್ಲಿಯೇ ಅಂತ್ಯ
ಗೊಳಿಸುವೆನು, ಕೊನೆಗೆ ನನ್ನ ಆಶೆಗಳೆ
ಲ್ಲವನ್ನೂ ಕೂಡ !

(ವಿಶ್ವಾಮಿತ್ರನು ಆಕೆಯನು ಆಲಿಂ
ಗನೆ ಮಾಡಿಕೊಳ್ಳುವನು)

ಮೇನಕೆಯ ಕಾರ್ಯ ಕೈಗೂಡಿತು.

(ಪ್ರ)

ವಿನಂತಿ—ಪ್ರಬೋಧ ವಿಶೇಷಾಂಕ
ಸಂಬಂಧದ ಮುದ್ರಣ ಸಂಬಂಧವಾಗಿ
ಸ್ವಲ್ಪ ಗಡಿಬಿಡಿ- ಆದಕ್ಕಾಗಿ ನಿನ್ನೆ ಪತ್ರಿ
ಕೆ ಪ್ರಕಟಣೆಗೆ ತೊಂದರೆ ಯಾಯಿತು.

Edited, Printed and Published by M S Krishna Rao at the Satyavadi Press, Chamara Agrahar, Mysore



ಭಾರತ ವಿಮಾನ ಪಡೆಗೆ ಬ್ರಿಟಿಷ್

ಐ ಟಿ ಯಾ ಲ್

ಟ್ರೇಡ್ ITL ಮಾರ್ಕ್

ಐಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರಿಸೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಹಾಯಿಲೆಯವರ ಕೂಠಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು ಇತ್ಯಾದಿ ಕೆಲಸಗಳಿಗೆ ನೆರವಾಗುವ ಸಂಸಾರ ಸೇವಕ.

ಹಿತವಾದ ಇದರ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.
Malleswaram P. O. Bangalore

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಅಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸು ಮಾಡಲಾಗಿದೆ, ¼ ತೋಲಾ, ½ ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸ್.

SHAKTI
...DHA